ಡಿ.ಕೆ. ರವಿ, ಐ.ಎ.ಎಸ್. ಇವರ ನಿಗೂಢ ಸಾವಿನ ತನಿಖೆಯನ್ನು ಸಿ.ಬಿ.ಐ.ಗೆ ಒಪ್ಪಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, 16ನೇ ತಾರೀಖು IAS ಅಧಿಕಾರಿ ಡಿ.ಕೆ. ರವಿಯವರ ಸಾವು ಆಗಿದೆ. ಅವತ್ತಿನ ದಿವಸ ಅವರ ಮಾವ ಹನುಮಂತರಾಯಪ್ಪನವರು ಒಂದು ಫಿರ್ಯಾದನ್ನು ದಾಖಲು ಮಾಡಿದ್ದಾರೆ. ಆ ಫಿರ್ಯಾದು ಬಂದ ಮೇಲೆ ಪೊಲೀಸಿನವರು ಅದನ್ನು ದಾಖಲು ಮಾಡಿಕೊಂಡು, ಮುಂದಿನ ತನಿಖೆಯನ್ನು ಪ್ರಾರಂಭ ಮಾಡಿದ್ದಾರೆ. 17ನೇ ತಾರೀಖು Assembly ಯಲ್ಲಿ ಮಾನ್ಯ ವಿರೋಧ ಪಕ್ಷದವರೆಲ್ಲರೂ ಕೂಡ ಆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಇಲ್ಲಿ ಮಾಡಿದ ಮೇಲೆ ಸರ್ಕಾರದ ವತಿಯಿಂದ ಮಾನ್ಯ ಗೃಹ ಸಚಿವರು ಆ ಬಗ್ಗೆ ಒಂದು ಲಿಖಿತ ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಲಿಖಿತ ಹೇಳಿಕೆಯಲ್ಲಿ ಸಾವಿನ ಬಗ್ಗೆ ಕೆಲವು ಮಾಹಿತಿಗಳನ್ನು ಕೊಟ್ಟಿದ್ದಾರೆ. ವಿರೋಧ ಪಕ್ಷದವರು ಇದನ್ನು CBI ಗೆ ಕೊಡಬೇಕೆಂದು ಒತ್ತಾಯವನ್ನು ಮಾಡಿದ ಸಂದರ್ಭದಲ್ಲಿ ಅವತ್ತು 'ಇದನ್ನು CID ಯಿಂದ ತನಿಖೆ ಮಾಡಿಸುತ್ತೇವೆ, ಒಬ್ಬ ಹಿರಿಯ ಅಧಿಕಾರಿ ನೇತೃತ್ವದಲ್ಲಿ ತನಿಖೆ ಮಾಡಿಸುತ್ತೇವೆ' ಎಂದು ನಾನು ಉತ್ತರವನ್ನು ಕೊಟ್ಟಿದ್ದೆ. ಈಗಾಗಲೇ ಒಬ್ಬ CID ಹಿರಿಯ ಅಧಿಕಾರಿ ನೇತೃತ್ವದಲ್ಲಿ ತನಿಖೆ ಪ್ರಾರಂಭ ಆಗಿದೆ. ಈ ತನಿಖೆ ಮುಂದುವರೆಯುತ್ತಿದೆ. ಅವತ್ತು ನಾನು ಮಾತನಾಡುವಾಗ, ನಮ್ಮ ಪೊಲೀಸಿನವರು ಕೂಡ ಸಮರ್ಥರಿದ್ದಾರೆ, ಅರ್ಹರಿದ್ದಾರೆ. ಆದ್ದರಿಂದ ಅವರಿಂದಲೇ ತನಿಖೆಯನ್ನು ಮಾಡಿಸಬೇಕಾಗುತ್ತದೆ ಎಂದು ಹೇಳಿದ್ದೆ. ನಾವು ಅವರಿಂದ ತನಿಖೆ ಮಾಡಿಸುವುದಿಲ್ಲ, ಬೇರೆ ತನಿಖಾ ಸಂಸ್ಥೆಯಿಂದ ತನಿಖೆ ಮಾಡಿಸುತ್ತೇವೆಂದು ಹೇಳಿದರೆ, ನಮ್ಮ ಪೊಲೀಸಿನವರ ಆತ್ಮಸ್ಥೈರ್ಯ ಕುಗ್ಗುತ್ತದೆ, ಆ ಕಾರಣದಿಂದ ನಮ್ಮ ಪೊಲೀಸಿನವರಿಂದಲೇ ನಾವು ತನಿಖೆ ಮಾಡಿಸುತ್ತೇವೆಂದು ಹೇಳಿದ್ದೆವು. ನಮ್ಮ CID ಯವರು ಇಂಥ ಅನೇಕ ಪ್ರಕರಣಗಳಲ್ಲಿ ಸಮರ್ಥವಾಗಿ ತನಿಖೆ ಮಾಡಿರತಕ್ಕಂಥ ನಿದರ್ಶನಗಳಿವೆ ಎನ್ನುವ ಕಾರಣಕ್ಕಾಗಿ ನಾವು ಈ ಪ್ರಕರಣವನ್ನು CID ಗೆ ವಹಿಸತಕ್ಕಂಥದ್ದನ್ನು ಮಾಡಿದೆವು. ಈಗ CIDಯವರು ಕೆಲವು progress ಗಳನ್ನು ಮಾಡಿದ್ದಾರೆ.

ರವಿಯವರ ತಂದೆ–ತಾಯಿಗಳು ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಬಳಿ ಬಂದು ಧರಣಿ ಮಾಡತಕ್ಕಂಥ ಸಂದರ್ಭದಲ್ಲಿ ನಾನು ಅವರನ್ನು ಭೇಟಿ ಮಾಡಿದ್ದೆ. ಅವರನ್ನು ಭೇಟಿ ಮಾಡಿದಾಗ ನಾನು 'ಇದನ್ನು CID ಗೆ ವಹಿಸಿದ್ದೇವೆ, CID ನಮ್ಮ ರಾಜ್ಯದ ತನಿಖಾ ಸಂಸ್ಥೆ. ಅದು ಸ್ವತಂತ್ರವಾಗಿ ನಿರ್ವಹಣೆ ಮಾಡತಕ್ಕಂಥ ಒಂದು ಸಂಸ್ಥೆ, ಇನ್ನೂ ಮರಣೋತ್ತರ ಪರೀಕ್ಷೆಯ report ಗಳು ಬಂದಿಲ್ಲ, ಬೇರೆ report ಗಳು ಕೂಡ ಬಂದಿಲ್ಲ, ಆ ಕಾರಣದಿಂದ ಅವುಗಳೆಲ್ಲಾ ಬಂದ ಮೇಲೆ ನಾನು ಒಂದು ತೀರ್ಮಾನವನ್ನು ಮಾಡುತ್ತೇನೆ' ಎನ್ನುವಂಥ ಮಾತನ್ನು ಅವತ್ತು ಹೇಳಿದ್ದೆ. ಅವತ್ತಿನ ದಿವಸ, ನಾನು ಮತ್ತು ಮಾನ್ಯ ಗೃಹ ಸಚಿವರು ಈ ಸದನ ಮುಗಿಯುವುದರೊಳಗೆ, ನಡೆಯುತ್ತಿರುವಾಗಲೇ ತನಿಖೆಯಲ್ಲಿ ಏನು progress ಆಗಿದೆ? ಅದರ ಬಗ್ಗೆ ಒಂದು status report ಅನ್ನು ಈ ಸದನದ ಮುಂದೆ ಇಟ್ಟು ಸದನದ ಗಮನಕ್ಕೆ ತರುತ್ತೇವೆ, ಅದರ ಮೇಲೂ ವಿರೋಧಪಕ್ಷದ ಸದಸ್ಯರಿಗೆ ಸಮಾಧಾನವಾಗದಿದ್ದರೆ, ಮುಂದೆ ಯೋಚನೆ ಮಾಡೋಣ ಎನ್ನುವಂಥ ಮಾತುಗಳನ್ನು ಹೇಳಿದ್ದೆವು. ಈ ಪ್ರಕರಣವನ್ನು ಮುಚ್ಚಿ ಹಾಕಬೇಕೆನ್ನುವಂಥ ಉದ್ದೇಶ ನಮಗೆ ಇಲ್ಲ ಅಥವಾ ಯಾರನ್ನೋ ರಕ್ಷಣೆ ಮಾಡಬೇಕೆನ್ನುವಂಥದ್ದು ಕೂಡ ನಮ್ಮ ಉದ್ದೇಶ ಅಲ್ಲ. ಇದರಲ್ಲಿ ಸರ್ಕಾರದ ಪಾತ್ರ ಏನೂ ಇಲ್ಲ. ಒಬ್ಬ IAS ಅಧಿಕಾರಿ, ಪ್ರಾಮಾಣಿಕವಾಗಿ, ದಕ್ಷ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಅವರು ಎಲ್ಲೆಲ್ಲಿ ಕೆಲಸ ಮಾಡಿದ್ದಾರೋ, ಅಲ್ಲೆಲ್ಲ ಉತ್ತಮವಾದಂಥ ಕೆಲಸ ಮಾಡಿದ್ದಾರೆ. ಅವರು ಕೋಲಾರದಲ್ಲಿ ಇದ್ದಾಗ ಕೂಡ ಒಳ್ಳೆಯ ಕೆಲಸವನ್ನು ಮಾಡಿದ್ದರು. ಅವರು ಕೋಲಾರದಲ್ಲಿ ಒಳ್ಳೆಯ ಕೆಲಸ ಮಾಡಿದ್ದರು ಎನ್ನುವ ಕಾರಣಕೋಸ್ಕರ ಅವರ ಮಾವನವರ ಮನವಿ ಮೇರೆಗೆ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಅತ್ಯಂತ ಪ್ರಮುಖವಾದಂಥ Commercial Tax Enforcement ಹುದ್ದೆಯನ್ನು ಅವರಿಗೆ ಕೊಡಲಾಗಿತ್ತು. ತೆರಿಗೆ evasion ನಡೆಯುತ್ತಿರುವಂಥದ್ದನ್ನು ಪತ್ತೆ ಹಚ್ಚಲಿ, ಈತ ಒಬ್ಬ ದಕ್ಷ, ಪ್ರಾಮಾಣಿಕ ಅಧಿಕಾರಿಯಾಗಿದ್ದಾನೆ ಎನ್ನುವ ಕಾರಣಕೋಸ್ಕರ, ಇವೆಲ್ಲಾ ಆಗಬೇಕೆನ್ನುವ ಕಾರಣಕೋಸ್ಕರ ಅತ್ಯಂತ ಪ್ರಮುಖವಾದಂಥ ಈ ಹುದ್ದೆಯನ್ನು

ಅವರಿಗೆ ಕೊಡಲಾಗಿತ್ತು. ನಮ್ಮ ಸರ್ಕಾರ ಇಂಥ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕೆನ್ನುವುದರ ಬಗ್ಗೆ ಎರಡು ಮಾತಿಲ್ಲ. ಸರ್ಕಾರ ಅವರಿಗೆ ರಕ್ಷಣೆ ಕೊಡಲೇಬೇಕು. ಅಧಿಕಾರಿಗಳು ಧೈರ್ಯವಾಗಿ, ನಿಷ್ಪಕ್ಷಪಾತವಾಗಿ ಮುಕ್ತ ವಾತಾವರಣದಲ್ಲಿ ಕೆಲಸ ಮಾಡಬೇಕೆನ್ನುವುದು ನಮ್ಮ ಸರ್ಕಾರದ ನಿಲುವು ಆಗಿದೆ. ನಾವು ಯಾವತ್ತೂ ಕೂಡ, ಯಾವ ಅಧಿಕಾರಿಗಳಿಗೆ ಕೂಡ. 'ಹೀಗೆ ಮಾಡಬೇಕು', 'ಹಾಗೆ ಮಾಡಬೇಕು' ಎಂದು ಹೇಳಿ ಬಲತ್ಕಾರ ಮಾಡಿದಂಥ ನಿದರ್ಶನಗಳು ಇಲ್ಲ. ನಾವು ಮಾಡುವುದೂ ಇಲ್ಲ. We are not interested in that and we have never done it and we will not do it. ಇದು ನಮ್ಮ ಸರ್ಕಾರದ ನಿಲುವು. ನಮಗೆ ನಮ್ಮ ಪೊಲೀಸ್ ವ್ಯವಸ್ಥೆ ಬಗ್ಗೆ ನಂಬಿಕೆ ಮತ್ತು ವಿಶ್ವಾಸವಿದೆ. ಅದೇ ರೀತಿ ಇವತ್ತಿನವರೆಗೆ, ಸಿ.ಬಿ.ಐ ಬಗ್ಗೆ ಬೇರೆ ರೀತಿಯಲ್ಲಿ ಯಾವತ್ತೂ ಕೂಡ ನಾನು ಮಾತನಾಡಿಲ್ಲ. ವಿರೋಧ ಪಕ್ಷದ ಬಹಳಷ್ಟು ಜನ ಸಿ.ಬಿ.ಐ ಬಗ್ಗೆ ಮಾತನಾಡಿದ್ದಾರೆ. ಸಿ.ಬಿ.ಐ 'ಚೋರ್ ಬಚಾವೋ ಇನ್‌ಸ್ಟಿಟ್ಯೂಷನ್' ಹಾಗೂ ಸಿ.ಬಿ.ಐ 'ಕಾಂಗ್ರೆಸ್ ಬಚಾವೋ ಇನ್‌ಸ್ಟಿಟ್ಯೂಷನ್' ಎಂದು ಹೇಳಿರುವುದನ್ನು ಕೂಡ ನಾವು ಕೇಳಿದ್ದೇವೆ. ನಾನು ಈ ರೀತಿ ಯಾವತ್ತಿಗೂ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಸಿ.ಬಿ.ಐ ಕೂಡ ಕೇಂದ್ರದಲ್ಲಿರುವಂತಹ ಒಂದು ತನಿಖಾ ಸಂಸ್ಥೆಯಾಗಿದ್ದು, ಅದು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಹ ಸಂಸ್ಥೆಯಾಗಿದೆ. ಅದೇ ರೀತಿ ಸಿ.ಐ.ಡಿ ಕೂಡ ಕರ್ನಾಟಕ ರಾಜ್ಯದಲ್ಲಿ ತನಿಖೆ ಮಾಡುವಂತಹ ಒಂದು ಸಂಸ್ಥೆಯಾಗಿದೆ. ಕೇಂದ್ರ ಸರ್ಕಾರ ತನಿಖೆಗಳಲ್ಲಿ ಅವರಾಗಿ ಅವರೇ ಭಾಗವಹಿಸುವುದಕ್ಕೆ ಒಕ್ಕೂಟದ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ರಾಜ್ಯ ಸರ್ಕಾರಗಳು, ವಿಶೇಷ ಪ್ರಕರಣಗಳಲ್ಲಿ ಸಿ.ಐ.ಬಿ ನಿಂದ ತನಿಖೆಯಾಗಬೇಕೆಂದು ಹೇಳಿದಾಗ, ಅದಕ್ಕೆ ಒಪ್ಪಿ, ತನಿಖೆ ಮಾಡಿರುವ ನಿದರ್ಶನಗಳಿವೆ ಮತ್ತು ಮಾಡುತ್ತಾರೆ. ಅದು ನಿಯಮ ಮತ್ತು ಕಾನೂನು ಕೂಡ ಆಗಿದೆ. ನಾವೂ ಅನೇಕ ಬಾರಿ ಸಿ.ಬಿ.ಐ ತನಿಖೆ ಆಗಬೇಕೆಂದು ಒತ್ತಾಯ ಮಾಡಿದ್ದೇವೆ. ಆದರೆ ಹಿಂದೆ ಇದ್ದ ಸರ್ಕಾರಗಳು ಸಿ.ಬಿ.ಐ ತನಿಖೆಗೆ ಒಪ್ಪಿಕೊಂಡಿರಲಿಲ್ಲ. ಸಿ.ಬಿ.ಐನಿಂದ ತನಿಖೆ ಆಗಲೇಬಾರದು, ಸಿ.ಐ.ಡಿ

ಯಿಂದಲೇ ತನಿಖೆ ಆಗಬೇಕೆಂಬ ಪ್ರತಿಷ್ಟೆ ಮತ್ತು ಹಠ ನಮಗಿಲ್ಲ. ಒಂದು Status Report ಬರಲಿ ಎಂದು ನಾವು ಕಾದೆವು. ಯಾವುದೇ ರಾಜ್ಯದಲ್ಲಿ ಒಂದು ಘಟನೆ ನಡೆದ ತಕ್ಷಣವೇ ಸಿ.ಬಿ.ಐ ಗೆ ವಹಿಸಿರುವ ನಿದರ್ಶನಗಳಿಲ್ಲ. ಅವರ ವ್ಯಾಪ್ತಿಯಲ್ಲಿರುವಂತಹ ಪೋಲಿಸ್ ವ್ಯವಸ್ಥೆಯಿಂದ ತನಿಖೆ ಮಾಡಿಸುವುದು ಇಡೀ ದೇಶದಲ್ಲಿ ಕಾನೂನು ರೀತ್ಯಾ ನಡೆದುಕೊಂಡು ಬಂದಿರುವ ವಿಚಾರವಾಗಿದೆ. ಹಾಗಾಗಿ ಈ ಘಟನೆ ನಡೆದ ತಕ್ಷಣ ಈ ಪ್ರಕರಣವನ್ನು ಸಿ.ಬಿ.ಐಗೆ ವಹಿಸಬೇಕೆಂದು ವಿರೋಧ ಪಕ್ಷ ಒತ್ತಾಯ ಮಾಡಿದಾಗ, ನಾವು ನಮ್ಮ ಪೋಲಿಸ್‌ರವರು ಕೂಡ ಸಮರ್ಥರಿದ್ದಾರೆ, ಅವರಿಗೂ ಕೂಡ ಅರ್ಹತೆಯಿದೆ, ಅವರಿಂದಲೇ ತನಿಖೆ ಮಾಡಿಸೋಣವೆಂದು ಅಭಿಪ್ರಾಯಪಟ್ಟೆವು. ಏಕೆಂದರೆ ಬೇರೆ ಬೇರೆ ರಾಜ್ಯಗಳಿಂದ ನಿಯೋಜನೆ ಮೇಲೆ ಹೋದ ಐ.ಪಿ.ಎಸ್, ಅಧಿಕಾರಿಗಳೇ ಸಿ.ಬಿ.ಐ.ನಲ್ಲಿಯೂ ಕೂಡ ಕಾರ್ಯನಿರ್ವಹಿಸುವುದು. ನಮಗೆ ಇಡೀ ಕಾನೂನು ವ್ಯವಸ್ಥೆಯಲ್ಲಿ ವಿಶ್ವಾಸವಿದೆ. ನಮಗೆ ಪ್ರಜಾಪ್ರಭುತ್ವ ಹಾಗೂ ನಮ್ಮ ನ್ಯಾಯಾಂಗದ ವ್ಯವಸ್ಥೆಯ ಮೇಲೆ ನಂಬಿಕೆಯಿದೆ. ನಾವು ಯಾವತ್ತೂ ಕೂಡ ಕಾನೂನಿಗೆ ಅಗೌರವ ತೋರಿಸುವಂತಹ, ನ್ಯಾಯಾಂಗ ವ್ಯವಸ್ಥೆಗೆ ಅಗೌರವ ತೋರಿಸುವಂತಹ ಯಾವ ಕೆಲಸವನ್ನೂ ಕೂಡ ಮಾಡುವುದಿಲ್ಲ. ನಮಗೆ Rule of Law ನಲ್ಲಿ ನಂಬಿಕೆಯಿದೆಯೆಂಬುದನ್ನು ಅತ್ಯಂತ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಆದರೆ, ಬಹಳ ನೋವಿನ ವಿಷಯವೆಂದರೆ, ಪಾಪ! ಡಿ.ಕೆ. ರವಿರವರು ಸತ್ತು ಹೋಗಿದ್ದಾರೆ. ಅವರು ಮರಣಪಟ್ಟ ಮರುದಿನವೇ ಅವರ ತಂದೆ–ತಾಯಿಗಳನ್ನು ವಿಧಾನಸೌಧಕ್ಕೆ ಕರೆತಂದು ಅವರಿಂದ ಧರಣಿ ಮಾಡಿಸುವುದು ಮತ್ತು ಹೇಳಿಕೆ ಕೊಡಿಸುವಂತಹ ಪ್ರಸಂಗ ನಡೆದಾಗ, ನನಗೆ ಸ್ವಲ್ಪ ನೋವಾಯಿತು. ನಾವ್ಯಾರು ಕೂಡ, ಯಾರೇ ಮರಣ ಹೊಂದಿರಲಿ, ವ್ಯಕ್ತಿಯ ಮರಣದ ವಿಷಯದಲ್ಲಿ ರಾಜಕಾರಣ ಮಾಡಬಾರದು. ನಾವೂ ರಾಜಕಾರಣ ಮಾಡಬಾರದು ಮತ್ತು ವಿರೋಧ ಪಕ್ಷದವರು ಕೂಡ ರಾಜಕಾರಣ ಮಾಡಬಾರದು. ಅದರಲ್ಲಿ ನಮಗೆ ನಂಬಿಕೆ ಮತ್ತು ವಿಶ್ವಾಸವಿಲ್ಲ ಅಥವಾ ರಾಜಕೀಯ ಲಾಭ ಮಾಡಿಕೊಳ್ಳಬೇಕೆಂಬುದು ಕೂಡ ಇಲ್ಲ. ಇದರಿಂದ ....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು:– ಮಾನ್ಯ ಅಧ್ಯಕ್ಷರೆ, . . .

(ಗೊಂದಲ)

ಶ್ರೀ ಸಿದ್ಧರಾಮಯ್ಯ:– ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀವೊಬ್ಬರೇ ಅಲ್ಲ ಮಾತನಾಡುವುದು, ನಾನು ಹೇಳುವುದನ್ನು ಕೇಳಿ. ನಾನು ಏನೂ ಹೇಳೇ ಇಲ್ಲ, ಆಗಲೇ ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಈ ರೀತಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಹೇಳಬಾರದು, ನಾವೇನೂ ರಾಜಕಾರಣ ಮಾಡುತ್ತಿಲ್ಲ. ಇದು ಸರಿ ಅಲ್ಲ. ನಾವೇನು ರಾಜಕಾರಣ ಮಾಡಿಲ್ಲ. ರವಿಯವರ ತಾಯಿ ಬಂದು voluntary ಯಾಗಿ ಹೇಳಿರುವುದು. ಇದರಲ್ಲಿ ಏನು ರಾಜಕಾರಣ ಇದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಕೇಳ್ರಿ ಸ್ವಲ್ಪ, ನಿಮಗೆ ನಾನು ಏನೂ ಹೇಳೇ ಇಲ್ಲ, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಲ್ಲಾ?

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ನೀವು ಕುಳಿತುಕೊಳ್ಳಿ. ಅವರಿನ್ನೂ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ದಯವಿಟ್ಟು, ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾವೇನು ರಾಜಕಾರಣ ಮಾಡುತ್ತಿಲ್ಲ, ಮಾಡುವುದಿಲ್ಲ. ಅವರಿಗೆ ನ್ಯಾಯ ಸಿಗಲಿಲ್ಲವೆಂದು ಹೇಳಿ, ಅವರ ತಂದೆ ತಾಯಿಯವರು ಬೇಜಾರಾಗಿ ಬಂದು ಧರಣಿ ಕುಳಿತರು. ಅವತ್ತೇ ನೀವು ನ್ಯಾಯ ಕೊಟ್ಟಿದ್ದರೆ ಮುಗಿದು ಹೋಗುತ್ತಿತ್ತು. ಅವರ ಮಾವನವರು ಸಹ ಬಂದಿದ್ದರು. ವಿನಾಕಾರಣ ಒಂದು ವಾರ ಇಡೀ ರಾಜ್ಯದಲ್ಲಿ ಗೊಂದಲ ನಿರ್ಮಾಣ ಮಾಡಿ, ಈಗ ಉತ್ತರ ಹೇಳುತ್ತಿದ್ದೀರಿ. ನಿಮಗೇನು ನೈತಿಕತೆ ಇದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರದಲ್ಲಿ ರಾಜಕೀಯ ಮಾಡುವುದಕ್ಕೆ ಬಯಸುವುದಿಲ್ಲ. ಅದರ ಅಗತ್ಯ ಸಹ ಇಲ್ಲ. ರಾಜಕೀಯ ಮಾಡಬೇಕಾದಂಥ ಅಗತ್ಯ ಕೂಡಾ ನಮಗೆ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನೀವು ರಾಜಕಾರಣ ಮಾಡಿಕೊಂಡು, ಒಂದು ವಾರ ತಡೆದುಕೊಂಡು, ಮತ್ತೆ ಅದಕ್ಕೆ ಸಾರಿಸುವಂಥ ಕೆಲಸವನ್ನು ಮಾಡಿ . . . .

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಮಗೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ, ಜನಶಕ್ತಿ ಮೇಲೆ ನಂಬಿಕೆ ಇದೆ. ಜನರ ಭಾವನೆಗಳನ್ನು ಗೌರವಿಸುವುದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿ ಸಹ ಆಗಿದೆ. ನಾವು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟುಕೊಂಡಿರುವವರು. ನನಗೆ 6 ದಿನ, 7 ದಿನ ಎಂದು ಈಗ ಹೇಳುತ್ತಿದ್ದೀರಿ, ಆದರೆ, ನೀವು ಒಂದು ಪ್ರಕರಣವನ್ನೂ ಸಹ ನಿಮ್ಮ 5 ವರ್ಷದಲ್ಲಿ CBIಗೆ ಕೊಡಲೇ ಇಲ್ಲವಲ್ರಿ.

(ಗೊಂದಲ)

ಅಧ್ಯಕ್ಷರು:– ಆ ಮಾತೆಲ್ಲ ಈಗ ಏಕೆ? ಅದನ್ನು ಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಮಗೆ ಏಕೆ ಹೇಳುತ್ತಿದ್ದೀರಿ? ನೀವು ಒಂದು ಪ್ರಕರಣನ್ನೂ ಸಿಬಿಐಗೆ ಕೊಡಲೇ ಇಲ್ಲವಲ್ರಿ. ನಿಮ್ಮ 5 ವರ್ಷದ ಆಡಳಿತದಲ್ಲಿ ಒಂದೇ ಒಂದು ಪ್ರಕರಣವನ್ನು ಸಹ CBIಗೆ ಕೊಡುವುದಕ್ಕೆ ಆಗಲಿಲ್ಲವಲ್ರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾವು ಕೊಟ್ಟಿಲ್ಲವೆಂದು ನೀವು ಕೊಡುವುದಿಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ರಾಜಕೀಯ ಮಾಡುತ್ತಿದ್ದೀರಿ, ಸಾವಿನಲ್ಲಿ ರಾಜಕೀಯ ಮಾಡುತ್ತಿದ್ದೀರಲ್ರೀ, ಮಾನ್ಯ ಅಧ್ಯಕ್ಷರೆ, ನಾನು ಅವರ ತಂದೆ ತಾಯಿಯವರ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅವತ್ತು ಯಾರೂ ಜನ ಕೇಳಿರಲಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಸಾರ್ವಜನಿಕರ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಅವರ ಭಾವನೆಗಳಿಗೆ, ಡಿ.ಕೆ. ರವಿಯವರ ತಂದೆ ತಾಯಿಯವರ ಭಾವನೆಗಳಿಗೆ ಗೌರವ ಕೊಡಬೇಕೆನ್ನುವ ಕಾರಣಕ್ಕೋಸ್ಕರ, ಸತ್ಯ ಹೊರ ಬರಬೇಕು, ತಪ್ಪಿತಸ್ಥರು ಯಾರು ಎಂದು ಗೊತ್ತಾಗಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ನಾನು ಈ ಸುಳ್ಳು ಆರೋಪಗಳಿಗೆ ಹೆದರಿಕೊಂಡು ಅಥವಾ ಭಯದಿಂದ CBIಗೆ ಕೊಡಬಾರದೆಂದುಕೊಂಡಿರಲಿಲ್ಲ. ನಮಗೆ CBI ಬಗ್ಗೆ ಸಹ ಗೌರವವಿದೆ. ಆದರೆ, ಇವರು CBI ಸಂಸ್ಥೆಯನ್ನು 'ಚೋರ್ ಬಚಾವೋ ಸಂಸ್ಥೆ' 'ಕಾಂಗ್ರೆಸ್ ಬಚಾವೋ ಸಂಸ್ಥೆ' ಎಂದು ಹೇಳಿದ್ದರು. ಇವರಿಗೆ ನಾಚಿಕೆಯಾಗಬೇಕು. ಕಾನೂನಿನ ವ್ಯವಸ್ಥೆಯಲ್ಲಿ ನಂಬಿಕೆ

ಇಟ್ಟುಕೊಂಡಿರುವಂಥವರು ಯಾರೂ ಸಹ ಈ ರೀತಿ ಹೇಳುವುದಿಲ್ಲ. ನ್ಯಾಯಾಂಗದ ವ್ಯವಸ್ಥೆಯಲ್ಲಿ ನಂಬಿಕೆಯನ್ನಿಟ್ಟುಕೊಂಡಿರುವಂಥ ಯಾರೂ ಸಹ ಈ ರೀತಿ ಹೇಳಿರುವುದಿಲ್ಲ. ವಿರೋಧ ಪಕ್ಷದವರು ಇದರಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ಅವರ ತಂದೆ ತಾಯಿಗಳ ಮಾತಿಗೆ, ಅವರ ಭಾವನೆಗಳಿಗೆ ಗೌರವ ಕೊಟ್ಟು, ಸಾರ್ವಜನಿಕರ ಭಾವನೆಗಳಿಗೆ ಗೌರವ ಕೊಟ್ಟು, ನಾನು ಈ ಘಟನೆಯನ್ನು . . . ಇಲ್ಲದೇ ಹೋದರೆ ನಾನು ಆ Status Report ಕೊಡುತ್ತಿದ್ದೆನು. ಆದರೆ, Hon'ble High Court ಒಂದು stay ಕೊಟ್ಟಿರುವುದರಿಂದ, ನಾನು ಆ Status Reportನ್ನು ಸದನದ ಮುಂದೆ ಇಡುತ್ತಿಲ್ಲ. ಕೋರ್ಟಿನ ಆದೇಶಕ್ಕೆ ಗೌರವ ಕೊಟ್ಟು, ಅದನ್ನು ಸದನದ ಮುಂದೆ ಇಡುತ್ತಿಲ್ಲ. ನಾನು ಈ ಪ್ರಕರಣವನ್ನು CBI ತನಿಖೆಗೆ ವಹಿಸುವುದಕ್ಕೆ ತೀರ್ಮಾನ ಮಾಡಿದ್ದೇನೆ.

(ಈ ಹಂತದಲ್ಲಿ ಇಡೀ ಸದನ ಚಪ್ಪಾಳೆಯೊಂದಿಗೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯನ್ನು ಸ್ವಾಗತಿಸುತ್ತಾ, ಜಯಕಾರ ಘೋಷಣೆಯನ್ನು ಕೂಗಿತು.)

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಒಂದು Written Statement ಇದೆ. ಇದನ್ನು ಸದನದ ಮುಂದೆ ಇಡುತ್ತಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, ನಾನು ಸ್ವಲ್ಪ ಮಾತನಾಡುತ್ತೇನೆ. ನಾನು ಎರಡು ನಿಮಿಷ ಮಾತನಾಡುತ್ತೇನೆ.

(ಗೊಂದಲ)

ಅಧ್ಯಕ್ಷರು:– ಒಂದು ನಿಮಿಷ ಇರಿ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಈ ಸದನದ ಮುಂದೆ ಮಂಡಿಸುತ್ತಿದ್ದೇನೆ.

ಶ್ರೀ ಡಿ.ಕೆ. ರವಿ ಅವರ ಸಾವಿನ ಬಗ್ಗೆ ದಿನಾಂಕ: 23.03.2015 ರಂದು ಮಾನ್ಯ ಮುಖ್ಯಮಂತ್ರಿರವರ ಹೇಳಿಕೆ

ದಿನಾಂಕ: 16.03.2015 ರಂದು ಸಂಜೆ ಸುಮಾರು 7.45 ಘಂಟೆಗೆ ಮೃತ ಶ್ರೀ ಡಿ.ಕೆ. ರವಿ ಅವರ ಮಾವ ಶ್ರೀ ಹನುಮಂತರಾಯಪ್ಪ ಅವರು ಮಡಿವಾಳ ಪೊಲೀಸರಿಗೆ ಶ್ರೀ ರವಿ ಅವರ ಅಕಾಲಿಕ ಹಾಗೂ ದುರಾದೃಷ್ಟಕರ ಸಾವಿನ ಬಗ್ಗೆ ದೂರು ದಾಖಲು ಮಾಡಿದ್ದರು. ಆ ದೂರಿನ ಆಧಾರದ ಮೇಲೆ ಮಡಿವಾಳ ಪೊಲೀಸರು ಯು.ಡಿ.ಆರ್. ಪ್ರಕರಣ ಸಂ.47/2015 ಸಿಆರ್.ಪಿ.ಸಿ. ಕಲಂ 174 ರಡಿ ದಾಖಲಿಸಿಕೊಂಡು ತನಿಖೆ ಪ್ರಾರಂಭಿಸಿರುತ್ತಾರೆ. ಶ್ರೀ ಹನುಮಂತರಾಯಪ್ಪನವರು ನೀಡಿರುವ ದೂರಿನಲ್ಲಿ, ಶ್ರೀ ರವಿ ಅವರು ದಿನಾಂಕ: 16.03.2015 ರಂದು ಬೆಳಿಗ್ಗೆ ಸುಮಾರು 9.30 ಘಂಟೆಗೆ ಜ್ಞಾನಭಾರತಿಯಲ್ಲಿರುವ ಮನೆಯಿಂದ ಕಛೇರಿಗೆ ತೆರಳಿದ್ದರು. ಬೆಳಿಗ್ಗೆ ಸುಮಾರು 11.30 ಘಂಟೆಗೆ ಕಛೇರಿಯಿಂದ ಅವರ ಸ್ವಂತ ಅಧಿಕೃತ ನಿವಾಸವಾದ ಸೇಂಟ್ ಜಾನ್ಸ ವುಡ್ಸ ಅಪಾರ್ಟ್‌ಮೆಂಟ್‌ಗೆ ಹೋಗಿದ್ದು, ಆಗಿನಿಂದ ಅವರು ಹೊರಗೆ ಬಂದಿರುವುದಿಲ್ಲವೆಂದು ಕಾರು ಚಾಲಕರು ತಿಳಿಸಿದ್ದಾರೆ. ನಂತರ ಸಂಜೆ ಸುಮಾರು 4.45 ಘಂಟೆಗೆ ಅವರ ಮಗಳು, ಶ್ರೀ ರವಿ ಅವರು ಯಾರ ಕರೆಗಳನ್ನು ಸ್ವೀಕರಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಶ್ರೀ ರವಿ ಅವರ ಕಾರು ಚಾಲಕರನ್ನು ವಿಚಾರಿಸಿದ ನಂತರ ಶ್ರೀ ಹನುಮಂತರಾಯಪ್ಪನವರು ಅನುಮಾನಗೊಂಡು ಎಲ್ಲರೂ ಮೇಲೆ ತಿಳಿಸಿರುವ ಅಪಾರ್ಟ್‌ಮೆಂಟ್‌ಗೆ ಹೋಗಿದ್ದರು. ನಂತರ, ಶ್ರೀ ರವಿ ಅವರ ಪತ್ನಿಯಾದ ಶ್ರೀಮತಿ ಕುಸುಮರವರು ತನ್ನ ಬಳಿಯಿದ್ದ ಬೀಗದ ಕೈಯಿಂದ ಬಾಗಿಲ ಬೀಗವನ್ನು ತೆಗೆದಾಗ, ಶ್ರೀ ರವಿ ಅವರು ಸೀಲಿಂಗ್ ಫ್ಯಾನಿಗೆ ನೇಣು ಬಿಗಿದು ಮೃತಪಟ್ಟಿರುವುದು ಕಂಡು ಬಂದಿರುತ್ತದೆ.

ಸ್ಥಳೀಯ ಪೊಲೀಸ್‌ರು ಪ್ರಾರಂಭಿಕ ತನಿಖೆ ನಡೆಸಿದ ನಂತರ, ಪ್ರಕರಣದ ಮುಂದುವರೆದ ತನಿಖೆಯನ್ನು ಸಿ.ಐ.ಡಿ.ಗೆ ಹಸ್ತಾಂತರಿಸಲಾಗಿರುತ್ತದೆ. ಡಿ.ಜಿ.ಪಿ ಸಿ.ಐ.ಡಿರವರು ಐ.ಜಿ.ಪಿ ಸಿ.ಐ.ಡಿರವರ ನೇತೃತ್ವದಲ್ಲಿ ಈ ಪ್ರಕರಣದ

ಸುಧೀರ್ಘ ತನಿಖೆ ನಡೆಸಲು ಡಿ.ಐ.ಜಿ.ಪಿ ಸಿ.ಐ.ಡಿ., ಇಬ್ಬರು ಪೊಲೀಸ್ ಅಧೀಕ್ಷಕರು, ನಾಲ್ಕು ಉಪ ಪೊಲೀಸ್ ಅಧೀಕ್ಷಕರು, ನಾಲ್ಕು ಆರಕ್ಷಕ ನಿರೀಕ್ಷಕರು ಮತ್ತು ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನೊಳಗೊಂಡ ತಂಡವನ್ನು ರಚಿಸಿ ಆದೇಶ ಹೊರಡಿಸಿರುತ್ತಾರೆ. ಆಗಿನಿಂದ ಸಿ.ಐ.ಡಿ.ಯು ನಿಷ್ಪಕ್ಷಪಾತವಾದ ಹಾಗೂ ವೃತ್ತಿಪರ ತನಿಖೆಯನ್ನು ಕೈಗೊಂಡಿರುತ್ತದೆ.

ಪ್ರಕರಣದ ತನಿಖೆ ಸಮರ್ಪಕವಾಗಿ ಮತ್ತು ಶೀಘ್ರಗತಿಯಲ್ಲಿ ನಡೆಯುತ್ತಿದೆ. ಈ ನಡುವೆ ಹಲವಾರು ಬಗೆಯ ಊಹಾಪೋಹಗಳು ಮತ್ತು ಕಟ್ಟುಕಥೆಗಳನ್ನು ಕೆಲವರು ಪ್ರಚಾರ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಪ್ರಕರಣದ ಸೂಕ್ಷ್ಮತೆಯನ್ನು ಅರ್ಥಮಾಡಿಕೊಂಡು ತನಿಖೆಗೆ ಅವಶ್ಯಕವಾದ ಎಲ್ಲಾ ಬಗೆಯ ಸಹಕಾರವನ್ನು ನೀಡುತ್ತಿದೆ. ಪ್ರಕರಣದ ಗಂಭೀರತೆಯನ್ನು ಅರಿತ ಕಾರಣದಿಂದಾಗಿಯೇ ಯಾವುದೇ ಸಮಯವನ್ನು ವ್ಯರ್ಥಮಾಡದೆ ತಕ್ಷಣದಲ್ಲಿಯೇ ಪ್ರಕರಣವನ್ನು ಸಿ.ಐ.ಡಿ.ಗೆ ಒಪ್ಪಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಯಾವುದನ್ನೂ ಮುಚ್ಚಿಡುವಂತಹ ಉದ್ದೇಶವಿಲ್ಲ ಎನ್ನುವುದನ್ನು ನಾನು ಅತ್ಯಂತ ಸ್ಪಷ್ಟವಾಗಿ ಅಷ್ಟೇ ಜವಾಬ್ದಾರಿಯುತವಾಗಿ ಸದನಕ್ಕೆ ತಿಳಿಸುತ್ತಿದ್ದೇನೆ. ನಮ್ಮದು ಒಕ್ಕೂಟ ವ್ಯವಸ್ಥೆ ಈ ವ್ಯವಸ್ಥೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯ ಪಾಲನೆ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಷಯ. ಅನಿವಾರ್ಯ ಪ್ರಕರಣಗಳಲ್ಲಿ ಮಾತ್ರ ಕೇಂದ್ರ ಸರ್ಕಾರ ಪ್ರವೇಶ ಮಾಡಬಹುದು. ಈ ಪ್ರಕರಣದಲ್ಲಿ ಬೇರೆ ರಾಜ್ಯಗಳಿಗೆ ಸಂಬಂಧಿಸಿದ ವಿಷಯಗಳಿಲ್ಲ. ಆದ್ದರಿಂದ ಸಿ.ಐ.ಡಿ ತನಿಖೆಯಿಂದ ಯಾವ ಅಪಚಾರವೂ ಆಗದು. ಸಿ.ಐ.ಡಿಯನ್ನು ಒಳಗೊಂಡಂತೆ ನಮ್ಮ ರಾಜ್ಯದ ಪೊಲೀಸ್ ಇಲಾಖೆಯ ದಕ್ಷತೆ ಮತ್ತು ಕಾರ್ಯಕ್ಷಮತೆ ಬಗ್ಗೆ ನನಗೆ ಪೂರ್ಣ ವಿಶ್ವಾಸವಿದೆ. ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ಕೊಡಬೇಕೆಂದು ವಿರೋಧ ಪಕ್ಷಗಳು ಒತ್ತಾಯಿಸುತ್ತಿವೆ. ಸಿ.ಬಿ.ಐ. ತನಿಖೆಯ ಬಗ್ಗೆ ನಮಗೆ ಯಾವುದೇ ರೀತಿಯ ಹಿಂಜರಿಕೆ ಇಲ್ಲ. ಆದರೆ, ರಾಜ್ಯದ ತನಿಖಾ ಸಂಸ್ಥೆಯಾದ ಸಿ.ಐ.ಡಿ.ಯನ್ನು ನಿರ್ಲಕ್ಷಿಸಿ ಸಿ.ಬಿ.ಐ.ಗೆ ತನಿಖೆಯನ್ನು ಒಪ್ಪಿಸುವುದರಿಂದ ಸಿ.ಐ.ಡಿ.ಯ ನೈತಿಕ

ಸ್ಥೈರ್ಯ ಕುಸಿದು ಹೋಗಬಹುದೆಂಬ ಆತಂಕ ನಮಗಿದೆ. ಈ ಒಂದು ಕಾರಣಕ್ಕಾಗಿ ಸಿ.ಬಿ.ಐ.ಗೆ ತನಿಖೆಯನ್ನು ಒಪ್ಪಿಸಿಲ್ಲ. ಇದರ ಹೊರತಾಗಿ ಬೇರೆ ಯಾವ ಕಾರಣಗಳಿಲ್ಲ.

ವಿರೋಧ ಪಕ್ಷಗಳು ಒಬ್ಬ ಅಧಿಕಾರಿಯ ಸಾವನ್ನು ಮುಂದಿಟ್ಟುಕೊಂಡು ರಾಜಕೀಯ ಲಾಭ ಗಳಿಸಲು ಹೊರಟಿ ರುವುದು ದುರದೃಷ್ಟಕರ ಬೆಳವಣಿಗೆ. ಈ ದುರುದ್ದೇಶದಿಂದ ವಿರೋಧ ಪಕ್ಷಗಳ ನಾಯಕರು ಸರ್ಕಾರದ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಮೃತ ಅಧಿಕಾರಿಯ ಕುಟುಂಬದ ಸದಸ್ಯರನ್ನು ಭಾವನಾತ್ಮಕವಾಗಿ ಬಳಸುತ್ತಿದ್ದಾರೆ. ದುಃಖತಪ್ತ ತಂದೆ–ತಾಯಿಗಳನ್ನು ಮಗನ ಅಂತ್ಯಕ್ರಿಯೆಯ ಮರುದಿನವೇ ಬೆಂಗಳೂರಿಗೆ ಕರೆತಂದು ವಿಧಾನ ಸೌಧದ ಮುಂದೆ ಧರಣಿ ಕೂರುವಂತೆ ಮಾಡಿರುವುದು ರಾಜಕೀಯ ಅಸೂಕ್ಷ್ಮತೆಯನ್ನು ತೋರಿಸುತ್ತದೆ.

ವಿರೋಧ ಪಕ್ಷಗಳ ಊಹಾಪೋಹ ಆಧಾರಿತ ಸುಳ್ಳು ಆರೋಪಗಳಿಂದಾಗಿ ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗ ಉಂಟಾಗುತ್ತಿದೆ. ಇದನ್ನು ನಿಯಂತ್ರಿಸುವುದು ಸರ್ಕಾರದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಿ.ಐ.ಡಿ. ತನಿಖೆಯ ಪ್ರಗತಿಯ ವರದಿಯನ್ನು ಸದನದ ಮುಂದಿಡಬೇಕೆಂದು ಬಯಸಿದ್ದೆ. ಆದರೆ, ಭಾನುವಾರದಂದು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರು ಸಿ.ಐ.ಡಿ. ತನಿಖೆಗೆ ಸಂಬಂಧಿಸಿದ ಮಧ್ಯಂತರ ವರದಿಯನ್ನು ಆದರಿಸಿ ಯಾವುದೇ ಸಾರ್ವಜನಿಕ ಹೇಳಿಕೆಯನ್ನು ನೀಡದಂತೆ ಮತ್ತು ಪಕ್ರಟಿಸದಂತೆ ತಡೆಯಾಜ್ಞೆ ನೀಡಿದ್ದಾರೆ. ಇದರಿಂದ ಸತ್ಯ ಸಂಗತಿಗಳನ್ನು ಹೇಳಲು ಹೊರಟ ನನ್ನ ಕೈಗಳನ್ನು ಕಟ್ಟಿದಂತಾಗಿದೆ. ನಮ್ಮ ಸರ್ಕಾರ ಉಚ್ಚ ನ್ಯಾಯಾಲಯದ ಮುಂದಿನ ಆದೇಶದ ನಿರೀಕ್ಷೆಯಲ್ಲಿದೆ.

ಆದಾಗ್ಯೂ, ಸಾರ್ವಜನಿಕರ ಭಾವನೆಗಳಿಗೆ ಸ್ಪಂದಿಸಿ ಮತ್ತು ಹೆತ್ತವರ ಆಶಯವನ್ನು ಗೌರವಿಸಿ ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಲು ನಿರ್ಧರಿಸಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಇರಿ, ನಾನು ಮಾತನಾಡುತ್ತೇನೆ. ಇವತ್ತು ಮುಖ್ಯಮಂತ್ರಿಯವರು ಏನು ಘೋಷಣೆ ಮಾಡಿದ್ದಾರೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– CBIಗೆ ವಹಿಸಿದರೂ ತೃಪ್ತಿ ಇಲ್ಲವೇ ನಿಮಗೆ?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ನೀವು ಸಾವಿನಲ್ಲಿಯೂ ರಾಜಕೀಯ ಮಾಡುತ್ತಿದ್ದೀರಲ್ಲ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಘೋಷಣೆ ಮಾಡುವುದಕ್ಕೆ ಒಂದು ವಾರದ ಕಾಲ ತೆಗೆದುಕೊಂಡು, ಒಂದು ವಾರದ ಕಾಲ ಇಡೀ ರಾಜ್ಯದಲ್ಲಿ ಗೊಂದಲ ನಿರ್ಮಾಣವಾಗಿ, ಇವತ್ತು ಜನರ ಒತ್ತಾಯಕ್ಕೆ ಮಣಿದು, ಈ ಹೋರಾಟದ ಬಗ್ಗೆ ಇವತ್ತೇನು ಹೇಳಿದರು ಮತ್ತು ಇವತ್ತು ಮುಖ್ಯಮಂತ್ರಿಗಳು ಎಲ್ಲಿಯವರೆಗೆ ಎಂದರೆ ಆ ಐ.ಎ.ಎಸ್. ಅಧಿಕಾರಿ ಡಿ.ಕೆ. ರವಿಯವರ ಚಾರಿತ್ರ್ಯಹರಣ ಮಾಡುವಂಥ ಕೆಲಸವನ್ನು ಮಾಡಿದರು. ಇವತ್ತು ಮುಖ್ಯಮಂತ್ರಿಯವರು ಈ ಸದನದ ಹಕ್ಕುಚ್ಯುತಿಯನ್ನು ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ಇಷ್ಟೆಲ್ಲ ರಾದ್ಧಾಂತ ಆದ ಮೇಲೆ ಕೊಟ್ಟಿದ್ದಾರೆ. ಇವತ್ತು ಕೊಡುತ್ತಿರುವಂಥ ಈ CBI ತನಿಖೆಯನ್ನು ಒಂದು ವಾರದ ಹಿಂದೆಯೇ ಕೊಡಬೇಕಾಗಿತ್ತು. ಈ ಸದನ ನಡೆಯಲಿಲ್ಲ. ಇಡೀ ವ್ಯವಸ್ಥೆಯನ್ನು ಹಾಳು ಮಾಡಿ, ವ್ಯಕ್ತಿಯ ಚಾರಿತ್ರ್ಯವನ್ನು ಹಾಳು ಮಾಡಿ ಇವತ್ತು ನೀಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ಅದು ಬರುವುದಿಲ್ಲ ಬಿಡಿ.

(ಗೊಂದಲ)

ಅಧ್ಯಕ್ಷರು:– ಈಗ ಒಂದು ಸಣ್ಣ ಪ್ರಕಟಣೆ ಇದೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸ್ವಲ್ಪ ನಾನು ಹೇಳಬೇಕಾಗುತ್ತದೆ. ಜನರ ಒತ್ತಡದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಸಿಬಿಐ ತನಿಖೆಗೆ ವಹಿಸಿದ್ದಾರೆ..

(ಗೊಂದಲ)

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ನೀಡಿ ಇದನ್ನು ಸಿಬಿಐಗೆ ವಹಿಸಿ ಕೊಟ್ಟಿದ್ದಾರೆ, ಅಲ್ಲಿಗೆ ಈ ವಿಷಯ ಮುಕ್ತಾಯವಾಯಿತು, ಇದರ ಮೇಲೆ ಚರ್ಚೆ ಮಾಡುವುದು ಏನಿದೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾವು ಮೃತರ ತಂದೆ ತಾಯಿಯವರನ್ನು ವಿಧಾನಸೌಧಕ್ಕೆ ಕರೆದುಕೊಂಡು ಬಂದಿದ್ದೇವೆಂದು ಹೇಳಿದರು. ಅವರು ಪಾಲೆಂಟರಿಯಾಗಿ ಬಂದರು, ನಾವು ಕರೆದುಕೊಂಡು ಬಂದಿಲ್ಲ, ಈ ರೀತಿ ರಾಜಕಾರಣ ಮಾಡುವುದು ಬೇಡ. ಇವರು ಒಂದು ಪಾರ ರಾಜಕಾರಣ ಮಾಡಿದರು. ಆ ತಂದೆ–ತಾಯಿಗಳನ್ನು ನಾವು ಕರೆದುಕೊಂಡು ಬಂದೆವು ಎಂದು ಹೇಳುವುದು ಸಭ್ಯವಲ್ಲ. ಸಿಬಿಐ ತನಿಖೆಗೆ ಕೊಡಬೇಕಾಗಿತ್ತು, ಕೊಡುತ್ತೇವೆಂದು ಹೇಳಬೇಕಷ್ಟೆ ಅದು ಬಿಟ್ಟು.....

(ಗೊಂದಲ)

ಅಧ್ಯಕ್ಷರು:– ಆಡಳಿತ ಪಕ್ಷದ ಮತ್ತು ವಿರೋಧಪಕ್ಷದ ಸದಸ್ಯರು ದಯವಿಟ್ಟು ಕುಳಿತುಕೊಳ್ಳುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾನು ಏನನ್ನು ಹೇಳುವುದಕ್ಕೆ ಹೊರಟಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಸಿಬಿಐ ತನಿಖೆಯನ್ನೇನು ಘೋಷಣೆ ಮಾಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇದನ್ನು ಅವರು ಒಂದು ವಾರದ ಹಿಂದೆ ಘೋಷಣೆ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು. ಜನರ ಭಾವನೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿತ್ತು. [ಗೊಂದಲ] ಶ್ರೀ ಜಗದೀಶ ಶೆಟ್ಟರ್ ನಾವು ಯಾವುದನ್ನೂ comment ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ವಿರೋಧಪಕ್ಷಗಳ ಹೋರಾಟಕ್ಕೆ ಸ್ಪಂದನೆ ಮಾಡಿದ್ದಾರೆ. ವಿರೋಧ ಪಕ್ಷಗಳ ಹೋರಾಟ, ಇಡೀ ರಾಜ್ಯದ ಜನರ ಹೋರಾಟಕ್ಕೆ ಸ್ಪಂದನೆ ಮಾಡಿದ್ದಾರೆ. ಅದಕ್ಕಾಗಿ ಇಂಥ ಇಶ್ಯುಗಳು ಬಂದಾಗ ತಕ್ಷಣದ ಸ್ಪಂದನೆ ಮಾಡುವಂಥ ಕೆಲಸ ಸರ್ಕಾರದಿಂದಾಗಬೇಕು, ಇವತ್ತು ಮಾಡಿದ್ದಾರೆ. ಇದರಲ್ಲಿ ವಿರೋಧಪಕ್ಷಗಳು ರಾಜಕಾರಣವನ್ನು ಮಾಡಿಲ್ಲ, ಅದನ್ನು ನಾನು ಒಪ್ಪುವುದಿಲ್ಲ..

(ಗೊಂದಲ)

ಅಧ್ಯಕ್ಷರು:– ಒಂದು ಸಣ್ಣ ಪ್ರಕಟಣೆ ಇದೆ.

2. ಪ್ರಕಟಣೆ

ವಿಷಯ: Czechoslovakia ದೇಶದ ಸಂಸದೀಯ ನಿಯೋಗ ಸದನದ ಕಲಾಪ ವೀಕ್ಷಿಸುತ್ತಿರುವ ಬಗ್ಗೆ

Hon'ble Leader and Members of the delegation of the Committtee on Economic Affairs of the Chamber of Deputies, Parliament of Czechoslovakia Republic are witnessing the